ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಸಿಬ್ಬಂದಿ.

736 (962) ಶ್ರೀ ನಾಯಕ್ ಜೆ. ಡಿ.(ಭಟ್ಕಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ 1987ನೇ ಇಸವಿಯಲಲಿ ಹಾಗೂ ನಂತರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಆ) ಹೈಕೋರ್ಟ್ ಹಾಗೂ ಸುಪ್ರೀಮ್ ಕೋರ್ಟ್‌ನಲ್ಲಿ ಆದೇಶಗೊಂಡು ಖಾಯಂ ನೇಮಕಾತಿಗೆ ಕಾಯುವವರ ಸಂಖ್ಯೆ ಎಷ್ಟು;

ಇ) ಮಾನ್ಯ ನ್ಯಾಯಾಲಯಗಳಿಂದ ಆದೇಶವಾಗಿದ್ದರೂ ಖಾಯಂ ನೇಮಕಾತಿ ವಿಳಂಬಕ್ಕೆ ಕಾರಣಗಳೇನು (ವಿವರ ನೀಡುವುದು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಯಾರೂ ಇಲ್ಲ.

ಆ) ಯಾರೂ ಇಲ್ಲ.

ಇ) ಉದ್ಭವಿಸುವುದಿಲ್ಲ.

ಬಿ.ಸಿ.ಎ. ಮತ್ತು ಎಂ.ಸಿ.ಎ. ಕೋರ್ಸ್‌ಗಳು

739(801) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿನ ಎಷ್ಟು ಕಾಲೇಜುಗಳಿಗೆ ಬಿ.ಸಿ.ಎ. ಮತ್ತು ಎಂ.ಸಿ.ಎ. ಕೋರ್ಸ್‌ಗಳಿಗೆ ಅನುಮತಿ ನೀಡಲಾಗಿದೆ.

ಆ) ಈ ಕೋರ್ಸ್‌ಗಳನ್ನು ಎಷ್ಟು ಸರಕಾರಿ ಕಾಲೇಜುಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ.;

ಇ) ಬಿ.ಸಿ.ಎ. ಪದವೀದರರು ಎಂ.ಸಿ.ಎ. ಸ್ನಾತಕೋತ್ತರ ಪದವಿ ಅಭ್ಯಸಿಸಲು ಅವಧಿಯನ್ನು ಎಷ್ಟು ವರ್ಷಗಳು ನಿಗದಿ ಪಡಿಸಲಾಗಿದೆ.?